ವಿಷ್ಣುದೇವ ಎದ್ದು ಕುಳಿತಿದ್ದ. ಅದು ಹೇಗೆ ಎಚ್ಚರಿಕೆಯಾಯಿತೋ...

ನಗರದ ಭಕ್ತರೆಲ್ಲ ಮಹಾನ್ ಭಕ್ತ ಕೃಷ್ಣಸೆಟ್ಟಿಯವರ ನೇತೃತ್ವದಲ್ಲಿ ಸೇರಿ ಲಕ್ಷ್ಮೀದೇವಿಯೊಂದಿಗೆ 'ಅಮ್ಮಾವ್ರ ಗಂಡ' ಎಂದು ತನ್ನನ್ನೂ ಸೇರಿಸಿ ಪೂಜೆ ಮಾಡಿ ಜೋಗುಳ ಹಾಡಿದಾಗ ಪಲ್ಲಂಗದಲ್ಲಿ ತಾನು ಪವಡಿಸಿದ್ದಲ್ಲವೇ? ವಿಷ್ಣುದೇವ ಯೋಚಿಸಲಾರಂಭಿಸಿದ್ದ. ಬಗೆ ಬಗೆ ಭಕ್ಷ್ಯಗಳನ್ನೆಲ್ಲ ತಿಂದು ಸ್ವಲ್ಪ ಅಜೀರ್ಣವಾಗಿತ್ತು ಅನಿಸುತ್ತದೆ. ಇಲ್ಲದಿದ್ದಲ್ಲಿ ಒಮ್ಮೆ ಮಲಗಿದರೆ ತನಗೆ ಹೀಗೆಲ್ಲ ನಡು ನಡುವೆ ಎಚ್ಚರವಾಗುವ ಕ್ರಮ ಇಲ್ಲ. ಮೊದಲು ಲಕ್ಷ್ಮಿ ಎದ್ದು ಮಿಂದು ಬಂದು ವಯ್ಯಾರದಿಂದ 'ರಮಣಾ ನೀ ಬೆಳಗಾಯಿತೇಳ್' ಎನ್ನಬೇಕು, ಆಮೇಲಲ್ಲವೇ ತಾನು ಏಳುವುದು? ಬದಿಯಲ್ಲಿ ಮಲಗಿದ್ದ ಲಕ್ಷ್ಮಿ ಇನ್ನೂ ಗೊರಕೆ ಹೊಡೆಯುತ್ತಿದ್ದಾಳೆ. ಬಾಗಿಲಲ್ಲಿ ಪಕ್ಷೀವಾಹನನೂ ಬಂದಿಲ್ಲ... ಹೊರಗೆ ನೋಡಿದರೆ ಸುರರೂ ಇಲ್ಲ, ಕಿನ್ನರರೂ ಇಲ್ಲ, ಕಿಂಪುರುಷರೂ ಇಲ್ಲ... ಅಂದರೆ ಇನ್ನೂ ರಾತ್ರಿ ಕಳೆದು ಬೆಳಗ್ಗೆಯೇ ಆಗಿಲ್ಲ! ಅದೇನು ಅವಸರದಲ್ಲಿ ತನಗೆ ಎಚ್ಚರವಾದದ್ದು? ಹೋ.. ಹೋ... ಮಲಗಿದ್ದ ಜಾಗ ಬೇರೆ!

